**(ದಿನಾಂಕಃ 09-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟಿ ಸವಾಲು : ವಾದಿ ಪರ ಶ್ರೀ ಡಿ ಪಿ ಟಿ ವಕೀಲರಿಂದ -**

1. ನಾನು 7ನೇ ತರಗತಿ ಓದಿದ್ದು ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ವಾದಿಯ ತಂದೆ ಶೆಟ್ಟೆಪ್ಪ ಗುಡಸ ಗ್ರಾಮದಲ್ಲಿ ದಿನಾಂಕ 2-10-1983 ರಂದು ತೀರಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಮಾನ್ಯವಾಗಿ ಜನನ ಮತ್ತು ಮರಣದ ದಿನಾಂಕದ ಮಾಹಿತಿಯನ್ನು ನೊಂದು ಮಾಡಿಸಲು ಅವರ ಮನೆಯವರೇ ಕೊಡುತ್ತಾರೆ ಎಂದರೆ ನಿಜ . ನನ್ನ ತಂದೆ ಹೆಸರು ಸಾತಪ್ಪ . ನನ್ನ ತಂದೆ ಸಾತಪ್ಪನ ಎಂದು ತೋರಿಸಲು ನನ್ನ ಜನನ ಪ್ರಮಾಣ ಪತ್ರ , ಶಾಲಾ ಪ್ರಮಣ ಪತ್ರ , ಚುನಾವಣಾ ಗುರುತಿನ ಚೀಟಿ ಹಾಗೂ ಆಧಾರ ಕಾರ್ಡ ಇರುತ್ತವೆ. ನನ್ನ ಗಂಡನ ಹೆಸರು ಗೂಳಪ್ಪ. ನನ್ನ ಗಂಡ ಗೂಳಪ್ಪ ಎಂದು ತೋರಿಸಲು ನನ್ನ ಲಗ್ನದ ಕಾರ್ಡ , ಫೋಟೊ ಇರುತ್ತವೆ. ಅವರ ಚುನಾವಣಾ ಗುರುತಿನ ಚೀಟಿ ಹಾಗೂ ರೇಶನ ಕಾರ್ಡ ಇರುತ್ತವೆ.

2. ಓಎಸ್ 64/2003 ನನ್ನ ಗಂಡನ ಅಪ್ಪ ಬಾಳಪ್ಪ ಇವರು ಹಾಕಿದ್ದು ಅದು 9-6-2005 ರಲ್ಲಿ ಡಿಸಮಿಸ ಆಗಿರುತ್ತದೆ ಎಂದರೆ ನಿಜ . ಅದರ ವಿರುದ್ಧ ಆರ್ ಎ ನಂ. 20/2012 ರಂತೆ ಅಪೀಲು ಮಾಡಿದ್ದರು ಎಂದರೆ ನಿಜ . ದಿನಾಂಕ 14-9-2022 ರಂದು ಅಪೀಲ ಪುರಸ್ಕರಿಸಿದೆ ಎಂದರೆ ನಿಜ . ಅಸಲು ದಾವಾ ನಂ. 64/2003 ರಲ್ಲಿ ಬಸವ್ವ , ಸ್ಥಾಮವ್ವ @ ಶಿವನವ್ವ , ತುಳಸವ್ವ ಇವರು ಮೃತ ಶೆಟ್ಟೆಪ್ಪನ ಮಕ್ಕಳು ಎಂದು ತೀರ್ಪು ಆಗಿತ್ತು . ಅದರ ವಿರುದ್ಧ ಅಪೀಲ ಮಾಡಿದೆವು ಎಂದರೆ ನಿಜ . ದಾವಾಸ್ತಿಯಲ್ಲಿ ಶೆಟ್ಟೆಪ್ಪ ಗೂಳಪ್ಪ ಹೊಲೇರ ಎಂದು ನಮೂದು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ 1 ರ ಆರ್.ಟಿ.ಸಿ. ನೋಡುತ್ತಿದ್ದು ಅದರಲ್ಲಿ ಶೆಟೆಪ್ಪ ಗೂಳಪ್ಪ ಇವರ ಹೆಸರು ಇದೆ ಎಂದರೆ ನಿಜ . ನಿ.ಪಿ-15 ನೋಡುತ್ತಿದ್ದು ಅದರಲ್ಲಿ ಶೆಟೆಪ್ಪ ಗೂಳಪ್ಪ ಹೊಲೇರ ಇವರು 1981 ರಲ್ಲಿ ಮೃತ ಆಗಿದ್ದು , ಆತನಿಗೆ ಬಾಳಪ್ಪ ಗೂಳಪ್ಪ ಹೊಲೇರ , ತಂಗೆವ್ವ ರಾಯಪ್ಪ ಗೊರಲಿ ಎಂಬ ಇಬ್ಬರು ವಾರಸುದಾರರು ಇದ್ದು, ತಂಗೆವ್ವ ಗೊರಲಿ ಇವರ ಕಬೂಲಿ ತೆಗೆದುಕೊಂಡು ಶೆಟ್ಟೆಪ್ಪನ ಹೆಸರು ಕಡಿಮೆ ಮಾಡಿ ಬಾಳಪ್ಪ ಇವರ ಹೆಸರು ದಾಖಲ ಆಗಬೇಕು ಎಂದು ವರದಿ ಕೊಟ್ಟಿದ್ದರು ಎಂದರೆ ಸಾಕ್ಷಿ ನಮ್ಮ ಅಜ್ಜ ಕೊಟ್ಟಿರಬೇಕು , ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಮೃತ ಶೆಟ್ಟೆಪ್ಪನಿಗೆ ನಾವು ವಾರಸುದಾರರು ಎಂದು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಅದರ ಬಗ್ಗೆ ಕೇಸ ನಡೆದಿದೆ ಎಂದು ಹೇಳುತ್ತಾರೆ. ನಾವು ಶೆಟ್ಟೆಪ್ಪನ ವಾರಸುದಾರರು ಎಂದು ಯಾವುದೇ ಘೋಷನಾತ್ಮಕ ದಾವೆ ಮಾಡಿರುವುದಿಲ್ಲ. ನಿ.ಪಿ-8 ರ ಪ್ರಕಾರ ವಾದಿಯು ಶೆಟ್ಟೆಪ್ಪನ ವಾರಸುದಾರರು ಎಂದು ಉತ್ತರ ಜೀವಿತ ಪ್ರಮಾಣ ಪತ್ರ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನನ್ನ ಅಜ್ಜ ಶೆಟ್ಟೆಪ್ಪನಿಗೆ ಮದುವೆ ಆಗಿರಲಿಲ್ಲ

ಎಂದು ಹೇಳುತ್ತಾರೆ. ಸದರಿ ನಿ.ಪಿ-8 ರ ಪ್ರಮಾಣ ಪತ್ರ ಸುಳ್ಳು ಇದೆ ಎಂದು ನಾವು ಬೆಳಗಾವಿಯ ಏಸಿ ಇವರ ಮುಂದೆ ದಾವೆ ಮಾಡಿದ್ದೇವೆ. ನನ್ನ ಅಜ್ಜ ಶೆಟ್ಟೆಪ್ಪನಿಗೆ ಮದುವೆ ಆಗಿರಲಿಲ್ಲ ಹಾಗೂ ಆತನಿಗೆ ಮಕ್ಕಳು ಇರಲಿಲ್ಲ ಎಂದು ನಾನು ಬೆಳಗಾವಿಯ ಏಸಿ ಇವರ ಮುಂದೆ ಪ್ರಶ್ನೆ ಮಾಡಿದ್ದೇನೆ. ಯಾವುದೇ ಅಪಿಲ ಮಾಡದೇ ಇದ್ದರೂ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮ ದಾಖಲೆಗಳಲ್ಲಿ ನಮ್ಮ ಅಡ್ಡ ಹೆಸರು ಹೊಲೇರ ಎಂದು ಹಾಗೂ ಬಂಗಾರಿ ಎಂದೂ ಸಹ ಇದೆ ಎಂರದೆ ನಿಜ . ಕಾಂಬಳೆ ಎಂದು ಇದೆ ಎಂದರೆ ಸರಿಯಲ್ಲ. ನನ್ನ ಮಾವ ಬಾಳಪ್ಪನನ್ನು ಮತ್ತು ಶೆಟ್ಟೆಪ್ಪನನ್ನು ಬಂಗಾರಿ ಮತ್ತು ಹೊಲೇರ ಎಂಬ ಅಡ್ಡ ಹೆಸರಿನಿಂದ ಗುರುತು ಹಿಡಿಯುತ್ತಿದ್ದರು ಎಂದರೆ ನಿಜ.

4. 30 ವರ್ಷಗಳ ಹಿಂದೆ ನನ್ನ ಮದುವೆ ಆಗಿದ್ದು ಅಂದಿನಿಂದ ಗುಡಸ ಗ್ರಾಮದಲ್ಲಿ ಇರುತ್ತೇನೆ. ನನ್ನ ಮಾವ ಬಾಳಪ್ಪನ ಮಕ್ಕಳು ಎಂದರೆ ಗೂಳಪ್ಪ , ಮಾರುತಿ , ಲಕ್ಷ್ಮಿಬಾಯಿ ( 2 ರಿಂದ 5ನೇ ಪ್ರತಿವಾದಿಯರು) ಎಂದರೆ ನಿಜ. ಮಾರುತಿ ಮಗನ ಹೆಸರು ಪಕ್ಕು . ಮಾರುತಿ ಹೆಂಡತಿ ಹೆಸರು ಮಹಾದೇವಿ . ಮಹಾದೇವಿ ತುಳಸವ್ವನ ಮಗಳು ಎಂದರೆ ನಿಜ. ಮೃತ ತುಳಸವ್ವ ಶೆಟ್ಟೆಪ್ಪನ ಮಗಳು ಎಂದರೆ ಸರಿಯಲ್ಲ. ಶೆಟ್ಟೆಪ್ಪನ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೆಟ್ಟೆಪ್ಪನಿಗೆ ಹೆಂಡತಿ ಮತ್ತು ಮಕ್ಕಳು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಬಸವ್ವ , ಸ್ಯಾಮವ್ವ @ ಶಿವನವ್ವ , ತುಳಸವ್ವ ಇವರು ಯಾರ ಮಕ್ಕಳು ಎಂದು ನಾವು ಇಲ್ಲಿಯವರೆಗೂ ತಿಳಿಯುವ ಪ್ರಯತ್ನ ಮಾಡಿರುವುದಿಲ್ಲ. ನನ್ನ ಗಂಡ ಗೂಳಪ್ಪನಿಗೆ ಎಲ್ಲಾ ಮಾಹಿತಿ ಇದ್ದರೂ ಸಹ ನಾನು ಆತನನ್ನು ನ್ಯಾಯಾಲಯಕ್ಕೆ ಬರಲು ಬಿಡದೇ ಆತನಿಂದ ಜಿಪಿಎ ತೆಗೆದುಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು : 7ನೇ ಪ್ರತಿವಾದಿ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದ -**

**6.** ಓ ಎಸ್ ನಂ. 64/2003 ರಲ್ಲಿ 2ನೇ ಪ್ರತಿವಾದಿ ನನ್ನ ಮಾವ ಬಾಳಪ್ಪ ಇದ್ದರು ಎಂದರೆ ನಿಜ . ಆ ದಾವೆಯಲ್ಲಿ ದಿನಾಂಕ 23-5-2001 ರಂದು ತುಳಸವ್ವ ಇವಳು ತೀರಿಕೊಂಡಿದ್ದಾಳೆ ಎಂದು ಹೇಳಿದೆವು ಎಂದರೆ ನಿಜ . ಸದರಿ ದಾವೆಯ ತೀರ್ಪಿನಲ್ಲಿ ವಾದಿ ನಂ. 3 ತುಳಸವ್ವ ತೀರಿಕೊಂಡಿದ್ದಾಳೆ ಎಂದು ಆ ತೀರ್ಪಿನ 13ನೇ ಪುಟದಲ್ಲಿ ಹೇಳಿದ್ದಾರೆ ಎಂದರೆ ಸಾಕ್ಷಿ ತೀರ್ಪಿನ ವಿರುದ್ಧ ಅಪೀಲು ಮಾಡಿದ್ದು ಆ ತೀರ್ಪು ವಜಾ ಆಗಿದೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ತುಳಸವ್ವನ ವಾರಸುದಾರರು ಎಂದು ಯಾವ ಆಧಾರದ ಮೇಲೆ ಮರಣ

ಉತಾರವನ್ನು ಹಾಜರ ಮಾಡಿದರು ಎಂದರೆ ಅವಳು ತೀರಿಕೊಂಡಿದ್ದನ್ನು ಮುಚ್ಚಿಟ್ಟು ದಾವೆ ಮಾಡಿದ್ದರು , ಆ ಕಾರಣದಿಂದ ಮರಣ ಉತಾರ ಹಾಜರ ಮಾಡಿದ್ದೆವು. ತುಳಸವ್ವ ಶೆಟ್ಟೆಪ್ಪನ ಮಗಳು ಎಂದು ನನ್ನ ಮಾವನಿಗೆ ಗೊತ್ತಿದ್ದ ಕಾರಣ ಮರಣ ಉತಾರ ಹಾಜರ ಮಾಡಿದ್ದೆವು ಎಂದರೆ ಸರಿಯಲ್ಲ. ಶೆಟ್ಟೆಪ್ಪನ ಮದುವೆ ಆಗಿತ್ತು ಹಾಗೂ ಆತನಿಗೆ 3 ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

7. 7ನೇ ಪ್ರತಿವಾದಿ ಬಸಪ್ಪ ಮಾಡಿದಂತಹ ಏಸಿ ಆಫೀನಲ್ಲಿನ ಅಪೀಲ ಭಕ್ಷೀಸು ಪತ್ರದ ಮೇಲೆ ಮಾಡಿಲ್ಲ , ವಾರಸಾದ ಮೇಲೆ ಮಾತ್ರ ಇದೆ ಎಂದರೆ ಸರಿಯಲ್ಲ. ಏಸಿ ಆಫೀಸಿನಲ್ಲಿ ಮಾಡಿದ ಅಪೀಲಿನಲ್ಲಿ ಭಕ್ಷೀಸು ಪತ್ರದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಶೆಟ್ಟೆಪ್ಪ ಭಕ್ಷೀಸು ಪತ್ರ ಮಾಡಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**